ಸಾಕ್ಷಿದಾರನನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 11.06.2025.

**ಮುಂದುವರೆದ ಪಾಟೀ ಸವಾಲು – 4 ರಿಂದ 7 ನೇ ಪ್ರತಿವಾದಿ ಪರಃ ಶ್ರೀ.ಎಫ. ಎಂ. ಎಂ. ವಕೀಲರಿಂದಃ**

ನಮ್ಮ ಗ್ರಾಮದಲ್ಲಿ 2 ವಿಧ್ಯಾ ಸಂಸ್ಥೆ ಇವೆ ಎಂದರೆ ಸರಿ. ಒಂದು ವಿಧ್ಯಾ ಸಂಸ್ಥೆಗೆ ಮಹಾಲಿಂಗಪ್ಪ ಗೂಳೇರ ಮತ್ತು ಇನ್ನೊಂದು ವಿಧ್ಯಾಸಂಸ್ಥೆಗೆ ಭರಮಗೌಡ ಮರಿಗೌಡರ ಅಧ್ಯಕ್ಷರು ಎಂದರೆ ಸರಿ. 1996 ರಂದು ಮಹಾಲಿಂಗಪ್ಪ ಗೂಳೇರ ಇವರು ಶಾಲೆ ಪ್ರಾರಂಭಿಸಿದ್ದಾರೆ ಅಂದರೆ ಸರಿ. ನಂತರ ಜಿಲ್ಲಾಧಿಕಾರಿಯವರ ಪರವಾನಿಗೆ ಪಡೆದು 1 ನೇ ಪ್ರತಿವಾದಿಯಿಂದ 7 ನೇ ಪ್ರತಿವಾದಿ ಆಸ್ತಿ ಖರೀದಿ ಮಾಡಿದ್ದಾರೆ ಅಂದರೆ ಸರಿಯಲ್ಲಾ. 1996 ಕ್ಕಿಂತ ಮುಂಚೆ ಸಾಗೂ ಮಾಡದೇ ಬಿಟ್ಟಂತಹ ಜಮೀನು ಎಂದರೆ ಸರಿಯಲ್ಲಾ. 1996 ಕ್ಕಿಂತ ಮುಂಚೆ ಇದ್ದ ದಾವಾ ಆಸ್ತಿಯಿ ಭಾವಚಿತ್ರಗಳು ಅಂತಾ ತೋರಿಸಿ ಕೇಳಲಾಗಿ ಸಾಕ್ಷಿಯು ನೀರಾಕರಿಸಿರುತ್ತಾರೆ. ಪ್ರತಿವಾದಿಯರು ಭಾವಚಿತ್ರ ಮತ್ತು ಸಿಡಿ ಹಾಜರುಮಾಡಿದ್ದು ಅವುಗಳನ್ನು ನಾನು ನೋಡಿರುವುದಿಲ್ಲಾ. 1 ಮತ್ತು 3 ನೇ ಪ್ರತಿವಾದಿ ನನ್ನ ದಾವೆಗೆ ತಕರಾರು ಸಲ್ಲಿಸಿದ್ದಾರೆ ಅಂದರೆ ಸರಿಯಲ್ಲಾ. ನನಗೆ ಓದಲು ಬರೆಯಲು ಬರುವುದಿಲ್ಲಾ. ದಿಃ 31.01.2018 ರಂದು 1 ನೇ ಪ್ರತಿವಾದಿ ನನ್ನ ದಾವೆಗೆ ತಕರಾರು ಸಲ್ಲಿಸಿದ್ದಾನೆ ಅಂದರೆ ನನಗೆ ಗೊತ್ತಿಲ್ಲಾ. 1 ನೇ ಪ್ರತಿವಾದಿ ತನ್ನ ತಕರಾಗಿನಲ್ಲಿ 4 ರಿಂದ 7 ನೇ ಪ್ರತಿವಾದಿಯರು ದಾವಾ ಆಸ್ತಿಯನ್ನು ಮೊದಲಿನಿಂದಲೂ ಕಬ್ಜಾ ಇರುವುದರಿಂದ ನಾನು ಖರೀದಿ ಕೊಟ್ಟಿದ್ದೇನೆ ಅಂತಾ ಬರೆದಿದ್ದಾನೆ ಅಂದರೆ ಸುಳ್ಳು ಎಂದು ನುಡಿಯುತ್ತಾರೆ. ನಾನು ನೋಂದಾದ ಖರೀದಿ ಪತ್ರ ರದ್ದು ಪಡಿಸಲು ಯಾವುದೇ ಕ್ರಮ ಕೈಗೊಂಡಿಲ್ಲಾ ಅಂದರೆ ಸಾಕ್ಷಿಯು

ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದು ನುಡಿಯುತ್ತಾರೆ. ಖರೀದಿ ಪತ್ರ ರದ್ದು ಕೋರಿ ಈ ದಾವೆ ಸಲ್ಲಿಸುವ ಪೂರ್ವದಲ್ಲಿ ಯಾವುದೇ ಅರ್ಜಿ ಸಲ್ಲಿಸಿಲ್ಲಾ ಅಂದರೆ ಸರಿ. ಖರೀದಿ ಮಾಡಿದ ನಂತರ ದಾವೆಕ್ಕಿಂತ ಪೂರ್ವದಲ್ಲಿ 4 ರಿಂದ 7 ನೇ ಪ್ರತಿವಾದಿಯರ ಹೆಸರು ಮಾಲೀಕ ಮತ್ತು ಕಬ್ಜೆದಾರ ಕಾಲಂದಲ್ಲಿ ನಮೂದಾದದನ್ನು ಏಲ್ಲಿಯಾ ಪ್ರಶ್ನೆ ಮಾಡಿಲ್ಲಾ ಅಂದರೆ ಸರಿ. ಸಾಕ್ಷಿ ಮುಂದುವರೆದು ನ್ಯಾಯಾಲಯಕ್ಕೆ ಬಂದಿದ್ದೆವೆ ಎಂದು ನುಡಿಯುತ್ತಾರೆ. ಸದರಿ ಖರೀದಿ ಪತ್ರಗಳು 1, 3 ಪ್ರತಿವಾದಿಯರಿಗೆ ಮತ್ತು ನನಗೂ ಬಾಂದಾಯಿಸುತ್ತವೆ ಎಂದರೆ ಸರಿಯಲ್ಲಾ. ಗಾಳಪೂಜಿ ಗ್ರಾಮದ ಉತ್ತರಕ್ಕೆ ಹೊಂದಿ 4 ರಿಂದ 7 ರವರ ಮನೆಗಳು ಮತ್ತು ದಾವಾ ಆಸ್ತಿಯಲ್ಲಿ ಕಟ್ಟಿದ ಕಟ್ಟಡ ಎಂದರೆ ನಾನು ನೋಡಿಲ್ಲಾ ಸುಳ್ಳು ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಚಕ್ಕುಬಂದಿ ನನಗೆ ಹೇಳಲು ಬರುವುದಿಲ್ಲಾ. 4 ರಿಂದ 7 ನೇ ಪ್ರತಿವಾದಿಯರ ಮನೆ ಮತ್ತು ಶಾಲೆ ದಾವಾ ಆಸ್ತಿಯಲ್ಲಿ ಇದೆ ಎಂದರೆ ಸಾಕ್ಷಿಯು ಸುಳ್ಳು  ದಾಖಲೆಗಳನ್ನು ಮಾಡಿ ಕಟ್ಟಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಕಟ್ಟಡ ಕಟ್ಟಬಾರದು ಅಂತಾ ಏಲ್ಲಿಯೂ ಪ್ರಶ್ನೆ ಮಾಡಿಲ್ಲಾ ಅಂದರೆ ಸಾಕ್ಷಿ ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ಖರೀದಿ ಪತ್ರಗಳನ್ನು ರದ್ದು ಕೋರಿಲ್ಲಾ ಅಂದರೆ ಸರಿಯಲ್ಲಾ. ನಾನು ಖರೀದಿ ಪತ್ರದ ರದ್ದತಿಗಾಗಿ ನನ್ನ ವಾದ ಪತ್ರದಲ್ಲಿ ಮತ್ತು ಪ್ರಮಾಣಪತ್ರದಲ್ಲಿ ಮಾಗಣಿ ಮಾಡಿಲ್ಲಾ ಮತ್ತು ಕೋರ್ಟ ಫೀ ತುಂಬಿಲ್ಲಾ ಅಂದರೆ ಸರಿಯಲ್ಲಾ.

1996 ರಿಂದ ದಾವಾ ಆಸ್ತಿ 4 ರಿಂದ 7 ನೇ ಪ್ರತಿವಾದಿಯರ ಕಬ್ಜಾ ವಹಿವಾಟಿಯಲ್ಲಿ ಇದ್ದ ಆಸ್ತಿ ಎಂದರೆ ಸರಿಯಲ್ಲಾ. ದಾವಾ ಆಸ್ತಿ 1 ನೇ ಪ್ರತಿವಾದಿ ಮತ್ತು ಆತನ ಕುಟುಂಬದ ಸಾಮೂಹಿಕ

ಕಬ್ಜಾ ವಹಿವಾಟ ಉಳ್ಳ ಆಸ್ತಿ ಅಲ್ಲಾ ಅಂದರೆ ಸರಿಯಲ್ಲಾ. ನನ್ನ ಅಮ್ಮ 2006 ರಲ್ಲಿ ಹಿಸ್ಸೆ ಕೋರಿ ದಾವೆ ಸಲ್ಲಿಸಿದ್ದರು ಅಂದರೆ ಸರಿ. ಸದರಿ ದಾವೆಯಲ್ಲಿ 1 ನೇ ಪ್ರತಿವಾದಿ ನಾನು ದಾವಾ ಆಸ್ತಿಯಲ್ಲಿ ಕಬ್ಜೆ ಇಲ್ಲಾ ಮತ್ತು ಖರೀದಿ ಕೊಟ್ಟಿದ್ದೇನೆ ಅಂತಾ ಹೇಳಿಕೆ ನೀಡಿದ್ದಾನೆ ಅಂದರೆ ಸರಿಯಲ್ಲಾ. ಸದರಿ ದಾವೆ 29.01.2007 ರಂದು ವಿಚಾರಣೆ ಆಗಿ ಕಿತ್ತು ಹಾಕಲಾಗಿದೆ ಎಂದರೆ ಸರಿಯಲ್ಲಾ. 7 ನೇ ಪ್ರತಿವಾದಿ ಮತ್ತು ಭರಮಗೌಡ ಇವರ ಮಧ್ಯ ಅನುದಾನದ ಸಲುವಾಗಿ ಅನೇಕ ದಿನ ವ್ಯಾಜ್ಯ ನಡೆದಿರುತ್ತದೆ ಅಂದರೆ ನನಗೆ ಗೊತ್ತಿಲ್ಲಾ. ಭರಮಗೌಡ ಕಾಂಗ್ರಸ್ ಪಕ್ಷದವರು 7 ನೇ ಪ್ರತಿವಾದಿ ಬಿಜೆಪಿ ಎಂದರೆ ಸರಿ. ಆದ್ದರಿಂದ ಭರಮಗೌಡ 7 ನೇ ಪ್ರತಿವಾದಿಗೆ ತೊಂದರೆ ಕೊಡಬೇಕು ಅಂತಾ ನನ್ನ ಕಡೆಯಿಂದ ಸುಳ್ಳು ದಾವೆ ಸಲ್ಲಿಸಿದ್ದಾರೆ ಅಂದರೆ ಸರಿಯಲ್ಲಾ. ಹನುಮಂತಪ್ಪ ಮೇಲೆ ಮತ್ತು 4 ರಿಂದ 7 ನೇ ಪ್ರತಿವಾದಿಯರ ಮೇಲೆ ಇಲ್ಲಸಲ್ಲದ ಸುಳ್ಳು ಆಪಾದನೆ ಮಾಡಿ ದಾವೆ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲಾ. ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಿಸ್ಸೆ ಇಲ್ಲಾ ಎಂದರೆ ಸರಿಯಲ್ಲಾ. ನಾನು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

Sd/-
ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.